ಶ್ರಿ ಕೆ. ಎಚ್. ಕುರಡಗಿ —ಮುಂಡರಗಿ ಮತ್ತು ಲಕ್ಕುಂಡಿ ಈ ಪ್ರದೇಶಗಳಲ್ಲಿ ಬಸ್ ನಿಲ್ದಾಣ ಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಂಡಿಲ್ಲದಿರಲು ಕಾರಣವೇನು ?

† ಶ್ರೀ ಅಜೀಜಸೇಟ್.—ಮುಂಡರಗಿಗೆ ಬಸ್ ಸ್ಯಾಂಡ್ ಬೇಕು ಇದನ್ನು ಆಲೋಚನೆ ಮಾಡುತ್ತೇವೆ ;

ಶ್ರೀ ಕೆ ಎಚ್. ಕುರಡಗಿ.—ಮುಂದಿನ ಬಡ್ಜೆಟ್ಟಿನೊಳಗೆ ಈ ಬಸ್ ಸ್ಟ್ಯಾಂಡಿನ ಅನುಕೂಲತೆ ವಿಚಾರ ಯೋಚಿಸಿ ತಕ್ಕ ಅನುಕೂಲ ಕಲ್ಪಿಸುವಿರಾ ?

ಶ್ರೀ ಅಜೀಜಸೇಟ್.—ಪರಿಶೀಲಿಸಿ ಅನುಕೂಲತೆ ಮಾಡಲು ವಿಚಾರಮಾಡೋಣ

ಶ್ರೀ ಸಿ. ಎನ್. ಪಾಟೀಲ್.—ಲಿಂಗಸುಗೂರಿಗೆ ಬಸ್ ನಿಲ್ದಾಣ ಬೇಕಾಗಿದೆ. ಅದನ್ನೂ ಪರಿಶಿಷ್ಟ ದಲ್ಲಿರುವ ತಮ್ಮ ಪಟ್ಟಿಗೆ ಸೇರಿಸಿಕೊಳ್ಳುವಿರಾ ?

ಶ್ರೀ ಅಜೀಜ್‌ಸೇಟ್.—ಅಲ್ಲಿ ಸರಿಯಾದ ಜಾಗ ದೊರೆತಿಲ್ಲ, ಆದ್ದರಿಂದ ಈ ಕೆಲಸ ನಿಧಾನವಾಗಿದೆ. ಮಾನ್ಯ ಸದಸ್ಯರು ಒಳ್ಳೆಯ ಜಾಗ ತೋರಿಸಿದರೆ ಆಲೋಚನೆ ಮಾಡೋಣ.

ಶ್ರೀ ಬಿ ಜಿ. ಬಣಕಾರ್.—ಗ್ರಾಮಾಂತರ ಪ್ರದೇಶದ ಜನರು ಬಂದು ಹೋಗಲು ಪಸ್ತು ಮಳೆ ಬಿಸಿಲು ಕಾಲಗಳಲ್ಲಿ ತಂಗಲು ಅವಕಾಶವಿಲ್ಲದೆ ಅನೇಕ ತೊಂದರೆ ಇರುವುದರಿಂದ ರಾಜ್ಯದ ಎಲ್ಲಾ ಕಡೆಯೂ ಪೆಡ್ಡುಗಳನ್ನು ನಿರ್ಮಿಸಲು ಯೋಚನೆ ಮಾಡುವಿರಾ ?

ಶ್ರೀ ಅಜೀಜ್‌ಸೇಟ್.—ಬಸ್ ಸ್ಟ್ಯಾಂಡ್ ಷೆಲ್ಟರುಗಳನ್ನು ಎಲ್ಲಾ ಗ್ರಾಮಗಳಲ್ಲೂ ಮಾಡಬೇಕೆಂದು ಇದೆ. ಸುಮಾರು ೫೦ ಕೋಟಿ ರೂಪಾಯಿ ಬೇಕಾಗುವುದು. ಎಲ್ಲಾ ಕಡೆ ರಾಷ್ಟ್ರೀಕರಣ ಮಾಡಿಲ್ಲ. ರಾಷ್ಟ್ರೀಕರಣವಾಗಿರುವ ಕಡೆ ಪ್ರಯಾಣಮಾಡುವವರ ಸಂಖ್ಯೆ, ಆವಶ್ಯಕತೆ ಮುಂತಾದ್ದನ್ನು ನೋಡಿ ಮಾಡಬೇಕು. ಎಲ್ಲಾ ಕಡೆ ಮಾಡುವುದು ಕಷ್ಟ. ಪಂಚಾಯಿತಿ, ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ ಮುಂತಾದ ಸಂಸ್ಥೆಗಳು ಮುಂದೆ ಬರಬೇಕು ಸಾಧ್ಯವಾದಷ್ಟು ನಾವು ಮಾಡುತ್ತೇವೆ.

ಶ್ರೀ ಎಂ. ನಂಜೇಗೌಡ.—ಹಿಂದೆ ಈಗಿನ ಮುಖ್ಯಮಂತ್ರಿಗಳು ಕಾರ್ಮಿಕ ಇಲಾಖೆಯ ಮಂತ್ರಿಗಳಾ ಗಿದ್ದಾಗ ಜಾವಗಲ್‌ನಲ್ಲಿ ಬಸ್ ನಿಲ್ದಾಣಕ್ಕೆ ಅಸ್ತಿವಾರ ಶಿಲೆ ಹಾಕಿದ್ದರು. ಅದನ್ನು ಈ ವರ್ಷ ಮಾಡುವಿರಾ?

ಶ್ರೀ ಅಜೀಜ್ ಸೇಠ್.— ಅಸ್ತಿವಾರ ಶಿಲೆ ಹಾಕಿದಮೇಲೆ ಅದನ್ನು ಫಲ್‌ಫಿಲ್ ಮಾಡಲೇಬೇಕು.

## PRIVILEGES AND PAY SCALES OF I.A.S. OFFICERS

128. Sri S. Bangarappa (Sorab).—

Will the Chief Minister be pleased to tle state:—

(*a*) the Pay Scale of the Officers of I. A. S. Cadre and their Privileges,

(*b*) whether they are under control of the State Government or Central Government,

(*c*) the steps taken by Governments to recommend to Government of India to abolish the Privileges enjoyed by these I.A.S. Officers?

Sri D. Devaraj Urs (Chief Minister) —

(*a*) *Vide* Statement appended.

(*b*) The I.A.S. Officers are under the control of the State Government while serving in connection with the affairs of the State and under the control of the Central Government while serving in connection with the affairs of the Union.

(*c*) No steps have been taken.

Statement

**A. Pay Scale of I.A.S. Officers-**

| | | |
|---|---|---|
| 1. | Junior Scale | Rs. 400-400-500-40 700-EB-30-1000, |
| 2. | Senior Scale | |
| | (*a*) Senior time Scale | Rs. 900(sixth year or under)-50-1,000-60-1,600-50, 1,800 |
| | (*b*) Selection Grade | Rs. 1,800-100-2,000. |
| 3. | Supertime Scale | Rs. 2,500-125/2-2,750 |
| 4. | Supertime Pay | Rs. 3,000 (2 posts)<br>Rs. 3,500 (1 post) |

**B. Privileges-** The I. A. S. Officer are not given any benifits as privileges. However; on a comparative basis. they are allowed the following benifits which are not normally admissible to other State Government Servants.—

1. Their age of superannuation is 58 years as is the case with al Central Government Staff.

2, Junior Scale Officers are sanctioned two advance increments for passing prescribed departmental examinations in time.

3. Those who have not studied Kannada prior to entry into service are reimbursed tution fee at Rs. 50-p.m. for a period of six month for acquiring knowledge of Kannada.

4. For purchase of furniture and other necessary equipment the I.A.S. Probationers are sanctioned an interest free advance not exceeding Rs. 500 recoverable in 10 equal monthly instalments.

5. A minimum number of selection grade posts is ensured at 15 percent of the senior Posts.

6. Dearness Alloowance is granted at Central Government rates even for the period they serve under the state Government

7. They cannot be suspended when disciplinary proceedings are contemplated against them, they can be suspended only when disciplinary proceedings are started against/initiated against them'

8. It is mandatory to sanction Special pay at specified rates to certain seiner scale posts.

9. An I.A.S. Officer to whome notice of three months has been given for premature retirement, *i.e.*, on attaining the age of 50 years can be granted leave due and admissible to him not extending beyond the date on which he attains the age of superannuation.

ಶ್ರೀ ಎಸ್. ಬಂಗಾರಪ್ಪ —ಈ ಸರಕಾರ ಬಂದಮೇಲೆ ಸೂಪರ್‌ಟೈಂ ಸ್ಕೇಲ್ ಆಫೀಸರುಗಳ ಸಂಖ್ಯೆ ಹೆಚ್ಚಾಗಿದೆ. ಇದರಿಂದ ರಾಜ್ಯಕ್ಕೆ ಜಾಸ್ತಿ ಪೆಟ್ಟು ಬೀಳುವುದು. ರಾಜ್ಯದ ಹಣಕಾಸಿನ ದೃಷ್ಟಿಯಿಂದ ಈ ಹುದ್ದೆಗಳು ಅನಗತ್ಯವಾಗಿರುವುದರಿಂದ ಮತ್ತು ಹೊರೆಯಾಗಿರುವುದರಿಂದ ಏಕೆ ಇದನ್ನು ತೆಗೆದುಹಾಕ ಬಾರದು.

ಶ್ರೀ ಡಿ. ದೇವರಾಜ ಅರಸ್.—ಇವು ನಾವು ಅಧಿಕಾರಕ್ಕೆ ಬಂದಮೇಲೆ ಮಾಡಿರುವುದಲ್ಲ. ಹಿಂದಿನಿಂದ ಮುಂದುವರಿಯುತ್ತಿವೆ. ಎರಡನೆಯದು ಸೂಪರ್‌ಟೈಂ ಸ್ಕೇಲ್‌ನಲ್ಲಿ ೩-೪ ಜನರಿರಬಹುದು, ಇದರಿಂದ ಬಹಳ ಖರ್ಚೇನು ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಐ. ಎ. ಎಸ್. ಆಫೀಸರುಗಳನ್ನು ಕೆಲವು ಸಂದರ್ಭಗಳಲ್ಲಿ ಸಸ್ಪೆಂಡ್ ಮಾಡಲು ಅವಕಾಶವಿಲ್ಲ. ಎಲ್ಲಾ ಅಧಿಕಾರಿಗಳಿಗೂ ಒಂದೇ ನಿಯಮವನ್ನೇಕೆ ಮಾಡಬಾರದು? ಸಸ್ಪೆಂಡ್ ಮಾಡಲು ಅಧಿಕಾರ ಏಕೆ ಪಡೆಯಬಾರದು?

ಶ್ರೀ ಡಿ. ದೇವರಾಜ ಅರಸ್.—ಐ.ಎ.ಎಸ್. ಆಫೀಸರುಗಳು ಇಂಡಿಯಾ ಸರ್ಕಾರದಿಂದ ನೇಮಕ ಮಾಡಲ್ಪಡುವರು. ಪನಿಷ್‌ಮೆಂಟ್, ಡಿಸ್‌ಮಿಸಲ್ ಮುಂತಾದ್ದು ಮಾಡಬೇಕಾದರೆ ಎನ್‌ಕ್ವೈರಿ ಮಾಡಬೇಕು. ಮಾಡಲು ಅಧಿಕಾರವಿದೆ. ಎನ್‌ಕ್ವೈರಿ ನಾವು ಮಾಡಿದಮೇಲೆ ಯು.ಪಿ.ಎಸ್.ಸಿ. ಒಪೀನಿಯನ್ ತಪ್ಪು ಮಾಡಿದ್ದಾರೆಂದು ಕಂಡರೆ ಪಡೆಯಬೇಕು. ಅವರು ಆಗುವುದಿಲ್ಲವೆಂದು ಅಭಿಪ್ರಾಯಪಟ್ಟರೆ ಇಂಡಿಯಾ ಸರ್ಕಾರದ ಅನುಮತಿ ಪಡೆಯಬೇಕು.

1-30 P.M.

ಶ್ರೀ ಡಿ. ದೇವರಾಜ ಅರಸ್.—ಡಿಸ್‌ಮಿಸಲ್ ಏನಾದರೂ ಮಾಡಬೇಕಾದರೆ ನೇರವಾಗಿ ನಾವು ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ರೆಕಮಂಡ್ ಮಾಡಬೇಕು, ಇಂಥವರು ನಾಲಾಯಕ್ ಇಂಥ ಕಾರಣಗಳಿಂದ ಡಿಸ್‌ಮಿಸ್ ಮಾಡಬೇಕು ಎಂದು. ಅವರು ಅಪಾಯಿಂಟಿಂಗ್ ಅಥಾರಿಟಿಯಾದ್ದರಿಂದ ಫೈನಲ್ ಆರ್ಡರ್ಸ್ ಅನ್ನು ಗವರ್ನಮೆಂಟ್ ಆಫ್ ಇಂಡಿಯಾದವರು ಮಾಡಬೇಕು.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ.—ತಾವು ಪರಿಶಿಷ್ಟದಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ, ತಿಂಗಳಿಗೆ ೫೦ ರೂಪಾಯಿಯನ್ನು ಕನ್ನಡ ಕಲಿಯುವವರಿಗೆ ಕೊಡುವ ಬಗ್ಗೆ ಹೇಳಿದ್ದೀರಿ ಐ. ಎ. ಎಸ್. ಅಧಿಕಾರಿಗಳು ಕನ್ನಡ ಕಲಿತಿದ್ದಾರೆಯೋ ಇಲ್ಲವೇ ಎನ್ನುವುದನ್ನು ಪರೀಕ್ಷೆ ಮಾಡುವುದಕ್ಕೆ ಏನಾದರೂ ಒಂದು ಇಲಾಖೆ ಇದೆಯೇ? ಕನ್ನಡ ಎರಡು ಅಕ್ಷರ ಸಹ ಕಲಿಯದಂಥ ಐ. ಎ. ಎಸ್. ಅಧಿಕಾರಿಗಳು ಇದ್ದಾರೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಕನ್ನಡವನ್ನು ಅವರು ಕಲಿಯಬೇಕು. ಡಿಪಾರ್ಟ್‌ಮೆಂಟಿನಲ್ಲಿ ಅವರಿಗೆ ಕನ್ನಡ ಕಲಿಯಲು ಎರಡು ವರ್ಷ ಟೈಂ ಕೊಟ್ಟಿದ್ದೇವೆ. ಇದರ ಬಗ್ಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಟಿಸ್ಪ್ ಮಾಡುತ್ತಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ಭಾರತದಂಥ ಬಡ ದೇಶದಲ್ಲಿ ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ವರಮಾನದ ಸಂಬಳ ಇರಬಾರದು ಎಂದು ತಾವು ಒಪ್ಪುತ್ತೀರಾ ? ಈಗ ೨-೩ ಜನ ಐ.ಎ.ಎಸ್. ಅಧಿಕಾರಿಗಳಿಗೆ ಸೂಪರ್‌ಟೈಂ ಸ್ಕೇಲುಗಳನ್ನು ಕೊಟ್ಟಿರುವುದನ್ನು ಇತರೆ ದರ್ಜೆಯ ಐ. ಎ ಎಸ್. ಅಧಿಕಾರಿಗಳ ಸಂಬಳದ ಮಟ್ಟಕ್ಕೆ ಇಳಿಸಿದರೆ ಈ ತಾರತಮ್ಯವನ್ನು ನಿವಾರಣೆ ಮಾಡಿದಂತಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಈ ತಾರತಮ್ಯ ಒಂದು ಸಾವಿರ ರೂಪಾಯಿಗಳಿಗೆ ಅವರ ಸಂಬಳಗಳನ್ನು ಇಳಿಸಿದರೂ ಇರುತ್ತದೆ. ಅದಕ್ಕಿಂತ ಕಡಿಮೆ ಸಂಬಳಕ್ಕೆ ಇಳಿಸಿದರೂ ಇರುತ್ತದೆ. ತಾರತಮ್ಯ ವಿಪರೀತ ಇರಬಾರದು ಎನ್ನುವುದನ್ನು ಒಪ್ಪಿಕೊಳ್ಳದೆ ಹೋದರೂ ಸಹ ತಿಂಗಳಿಗೆ ಒಂದು ಸಾವಿರ ರೂಪಾಯಿಯ ತಾರತಮ್ಯ ಇಲ್ಲದಂತೆ ಮಾಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಈಗ ಸಂಬಳಸಾರಿಗೆಗಳನ್ನು ಗೊತ್ತು ಮಾಡಿರತಕ್ಕಂಥಾದ್ದು ಐ. ಎ ಎಸ್. ಆಫೀಸರ್ಸ್ ಆಗಲೀ, ಬೇರೆ ಸರ್ವೀಸ್‌ನಲ್ಲಿರುವವರಿಗಾಗಲೀ ಇವತ್ತಿನ ಲೆಕ್ಕಾಚಾರ ಹೆಚ್ಚು ಮಾಡುವುದಕ್ಕೆ ಯಾವ ಕಾರಣಗಳೂ ಇಲ್ಲದೆ ಇರಬಹುದು. ಕಡಿಮೆ ಮಾಡುವುದಕ್ಕೂ ಅಂಥ ಕಾರಣಗಳೂ ಇರಲಿಲ್ಲ.